೧	೨	೩
೧೨೦ ಗುಡ್ಡದೂರು	ಚಿಕ್ಕಮಗಳೂರು	ಚಿಕ್ಕಮಗಳೂರು
೧೨೧ ಕುರೆಕೆಂಚ್ಚಿ		
೧೨೨ ಚೀರನಹಳ್ಳಿ	ತರೀಕೆರೆ	,,
೧೨೩ ಬೋವಿನಕೆರೆ		
೧೨೪ ಹೊನ್ನೇನಹಳ್ಳಿ	ಕಡೂರು	,,

ಸರಕಾರಿ ವೆಚ್ಚ ಹಾಗೂ ಆದಾಯ ಕುರಿತು

೬೨೪. ಶ್ರೀ ಸಿ. ಎಂ. ಉದಾಸಿ (ಹಾನಗಲ್).—ವಾಣಿಜ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ರಾಜ್ಯ ಸರ್ಕಾರಿ ನೌಕರರಿಗೆ ಒಂದು ವರ್ಷಕ್ಕೆ ವೆಚ್ಚವಾಗುವ ವೇತನ ಹಾಗೂ ಇತರ ವೆಚ್ಚಗಳು ಎಷ್ಟು ?

ಆ) ಸರ್ಕಾರದ ಒಟ್ಟು ಆದಾಯವೆಷ್ಟು ? ವಿವರವಾಗಿ ತಿಳಿಸುವುದು.

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು).—

ಅ) ೧೯೮೭–೮೮ರ ಬಜೆಟ್ ಅಂದಾಜು ಪ್ರಕಾರ (ಕೋಟಿ ರೂ.)

೧) ಸರ್ಕಾರಿ ನೌಕರರ ಬಗ್ಗೆ	೪೫೩.೬೩
೨) ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯತ್‌ಗೆ ವರ್ಗಾವಣೆ ಆಗಿರುವ ಸರ್ಕಾರಿ ನೌಕರರ ಬಗ್ಗೆ	೪೪೦.೭೪
ಜುಮ್ಲ	೮೯೩.೩೭

ಆ) ೧೯೮೭–೮೮ರ ಬಜೆಟ್ ಅಂದಾಜು ಪ್ರಕಾರ

ತೆರಿಗೆಗಳು	೧೯೧೧.೩೨
ತೆರಿಗೆ ರಹಿತ	೭೩೪.೨೭
ಬಂಡವಾಳ ಜಮೆಗಳು	೧೨೪೩ ೧೭
ಜುಮ್ಲ	೩೯೮೮.೭೬

ಸಿ.ಆರ್.ಇ. ಸೆಲ್ ಕೆಲಸ ಕಾರ್ಯದ ರೂಪರೇಷೆಗಳ ಬಗೆ

೬೩. ಶ್ರೀ ಎಂ. ಶಿವಣ್ಣ (ಹೆಗ್ಗಡ ದೇವನಕೋಟೆ).—ವಾಣಿಜ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಸಿಆರ್‌ಇಸೆಲ್ (ನಾಗರೀಕ ಹಕ್ಕು ರಕ್ಷಣಾ ದಳ) ಅಸ್ತಿತ್ವದಲ್ಲಿದೆಯೇ ? ಹಾಗಿದ್ದಲ್ಲಿ ಅದರ ರೂಪರೇಷೆಗಳೇನು ?

ಆ) ಇದುವರೆವಿಗೂ ಎಷ್ಟು ಪ್ರಕರಣಗಳನ್ನು ದಾಖಲು ಮಾಡಿಕೊಂಡಿದೆ ?

ಇ) ಇದರಲ್ಲಿ ಅಸ್ಪೃಶ್ಯತಾ ಹಾಗೂ ಸಾಮಾಜಿಕ ಬಹಿಷ್ಕಾರ ಎಂದು ದಾಖಲಾದ ಪ್ರಕರಣಗಳು ಎಷ್ಟು ?

ಈ) ಅವುಗಳಲ್ಲಿ ಎಷ್ಟು ಪ್ರಕರಣಗಳಲ್ಲಿ ಅಪರಾಧಿಗಳನ್ನು ಶಿಕ್ಷೆಗೆ ಗುರಿಪಡಿಸಲಾಗಿದೆ ?

ಶ್ರೀ ಆರ್. ಎಲ್. ಜಾಲಪ್ಪ (ಗೃಹ ಸಚಿವರು).—

ಅ) ಹೌದು

೧) ನಾಗರೀಕ ಹಕ್ಕು ರಕ್ಷಣಾದಳವು ಪೊಲೀಸ್ ಇಲಾಖೆಯ ಒಂದು ಘಟಕವಾಗಿದ್ದು, ನಾಗರೀಕ ಹಕ್ಕು ಸಂರಕ್ಷಣಾ ಕಾಯ್ದೆಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನರ ಹಿತರಕ್ಷಣೆ ಹಾಗೂ ಸಂವಿಧಾನದ ಸ್ವಯಂ ಈ ಜನರಿಗಾಗಿ ಕಲ್ಪಿಸ ಬೇಕಾದ ಅಧಿಕಾರ ಮತ್ತು ಸವಲತ್ತುಗಳಿಂದ ವಂಚಿತರಾಗದಂತೆ ನೋಡಿಕೊಳ್ಳುವುದು ಅದರ ಮುಖ್ಯ ಕರ್ತವ್ಯ.

೨) ಸುಳ್ಳು ಜಾತಿ ಪತ್ರವನ್ನು ಪಡೆದ ಬಗ್ಗೆ ವರದಿಯಾದ ಪ್ರಕರಣಗಳಲ್ಲಿ ಈ ಘಟಕದ ಅಧಿಕಾರಿಗಳು ವಿಚಾರಣೆಯನ್ನು ಕೈಗೊಂಡು ಅಪರಾಧವು ಸ್ಥಿರಪಟ್ಟಾಗ ಸಂಬಂಧಪಟ್ಟ ಪೊಲೀಸ್ ಠಾಣೆಗಳಲ್ಲಿ ಮೊಕದ್ದಮೆಯನ್ನು ನೊಂದಾಯಿಸಿ, ಈ ಬಗೆಗಿನ ತನಿಖೆ ಕೈಗೊಳ್ಳಲಾಗುತ್ತದೆ.

೩) ದೌರ್ಜನ್ಯಕ್ಕೆ ಒಳಗಾದ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗದ ಜನರಿಗೆ ಯಾವ ರೀತಿಯ ಅನ್ಯಾಯವಾಗದಂತೆ ಸೂಕ್ತ ನ್ಯಾಯ ದೊರಕುವ ಹಾಗೆ ನೋಡಿಕೊಳ್ಳಲಾಗುತ್ತದೆ.

೪) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನಗಳ ಮೇಲೆ ದೌರ್ಜನ್ಯ ನಡೆದಾಗ ಈ ಘಟಕದ ಅಧಿಕಾರಿಗಳು ಸ್ಥಳಕ್ಕೆ ಭೇಟಿ ಕೊಟ್ಟು ಪರಿಸ್ಥಿತಿಯನ್ನು ಪರಿಶೀಲಿಸಿ ನೊಂದವರ ಆಸ್ತಿಗೆ ಆದ ನಷ್ಟ ಮತ್ತು ಹಣವನ್ನು ಅವಲೋಕಿಸಿ ಪರಿಹಾರ ಕೊಡಲು ಶಿಫಾರಸ್ಸು ಮಾಡುತ್ತದೆ.

೫) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನರು ತಮ್ಮ ತೊಂದರೆಗಳ ಬಗ್ಗೆ ದೂರು ಸಲ್ಲಿಸಿದಲ್ಲಿ ಅರ್ಜಿಗಳ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಪಡೆದು ಆದ್ಯತೆಯ ಮೇಲೆ ವಿಚಾರಣೆ ಕೈಗೊಂಡು ಸೂಕ್ತ ಕ್ರಮವನ್ನು ಕೈಗೊಳ್ಳಲಾಗುತ್ತದೆ.

ಆ) ಈ ಘಟಕವು ದುರುದ್ದೇಶದಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿದವರೆಂದು ಬಂದ ಜಾತಿ ಪತ್ರಗಳನ್ನು ಪ್ರಾಥಮಿಕ ವಿಚಾರಣೆಯಿಂದ ನೊಂದಾಯಿಸಿಕೊಳ್ಳಬಹುದಾಗಿದ್ದು, ಅಂತಹ ೧೮೮೫ ಪ್ರಕರಣಗಳನ್ನು ದಾಖಲು ಮಾಡಿಕೊಳ್ಳಲಾಗಿದೆ.

ಇ) ೧ ಅಸ್ಪೃಶ್ಯತಾ ಪ್ರಕರಣಗಳು ೨೪೭೮

೨) ಸಾಮಾಜಿಕ ಬಹಿಷ್ಕಾರ ಪ್ರಕರಣಗಳು ೧೧

ಈ) ಶಿಕ್ಷೆ ವಿಧಿಸಲ್ಪಟ್ಟವು ೧೨

ಮೈಸೂರು ಗದ್ದಿಗೆ ರಸ್ತೆ ಅಪಘಾತದಲ್ಲಿ ಮಡಿದವರ ಕುಟುಂಬಕ್ಕೆ ಪರಿಹಾರ ನೀಡುವ ಬಗ್ಗೆ

೩೫೯. ಶ್ರೀ ಎಂ. ಶಿವಣ್ಣ (ಹೆಗ್ಗಡದೇವನ ಕೋಟೆ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮೈಸೂರು ಗದ್ದಿಗೆ ರಸ್ತೆಯಂ ಅಸವಾಳು ಬಳಿ ನಡೆದ ಅಪಘಾತಕ್ಕೆ ಕಾರಣವೇನು ? ಹಾಗೂ ಮಡಿದವರ ಸಂಖ್ಯೆ ಎಷ್ಟು ?

ಆ) ಅಪಘಾತಕ್ಕೀಡಾದವರ ಕುಟುಂಬದವರಿಗೆ ಎಕ್ಸ್‌ಗ್ರೇಷಿಯಾ ಪರಿಹಾರವನ್ನು ಕೊಡಲಾಗಿದೆಯೆ ?

ಇ) ಅಪಘಾತದಲ್ಲಿ ಮಡಿದ ನಿರ್ವಾಹಕ ಮತ್ತು ಚಾಲಕರ ಮಕ್ಕಳಿಗೆ ಸಾರಿಗೆ ಇಲಾಖೆಯಲ್ಲಿ ನೌಕರಿ ಒದಗಿಸಲಾಗಿದೆಯೇ ? ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಶ್ರೀ ಜಿ. ಜಿ. ಆರ್. ಸಿಂಧ್ಯ (ಸಾರಿಗೆ ಸಚಿವರು).—

ಅ) ಧಾರಾಕಾರವಾಗಿ ಸುರಿದ ಮಳೆಯಿಂದ ಕೆರೆಗಳು ಒಡೆದು ಉಂಟಾದ ಪ್ರವಾಹದಲ್ಲಿ ಬಸ್ಸು ಕೊಚ್ಚಿಹೋಗಿರುತ್ತದೆ. ಚಾಲಕ ನಿರ್ವಾಹಕರಲ್ಲದೆ ೯ ಮಂದಿ ಪ್ರಯಾಣಿಕರು ಮೃತಪಟ್ಟಿರುತ್ತಾರೆ.